## ಮಾತು-ಕತೆ

ಸಹ್ಯಾದ್ರಿ ಶ್ರೇಣಿಯ ಸುತ್ತಮುತ್ತಲಿನ ಎಲ್ಲಾ ಕ್ಷೇತ್ರಗಳ, ತೀರ್ಥಗಳ ಮಹಿಮೆಯನ್ನೊಳಗೊಂಡ ಕಾವ್ಯವಿದು. ಇದರ ಹಸ್ತಪ್ರತಿ ಇದ್ದಿದ್ದು ಕವಿ ಕುವೆಂಪು ಅವರ ಮನೆಯಲ್ಲಿ. ಅವರೇ ಅದನ್ನು ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರಕ್ಕೆ ಕೊಟ್ಟಿದ್ದರು. ಅವರ ಮನೆಯಲ್ಲಿ ಪ್ರತಿ ವರ್ಷ ಸರಸ್ವತಿ ಪೂಜೆಯ ದಿನ ಆ ಹಸ್ತಪ್ರತಿಗೆ ಪೂಜೆ ಮಾಡಿ ಮಿಕ್ಕಂತೆ ಕಟ್ಟಿ ಇಟ್ಟುಬಿಡುತ್ತಿದ್ದರಂತೆ. ನಾನು ಆ ಕಾವ್ಯವನ್ನು ಸಂಪಾದಿಸುವ ಸಮಯದಲ್ಲಿ ಕುವೆಂಪು ಅವರನ್ನು ಭೇಟಿ ಮಾಡಿದ್ದೆ. 'ಸಹ್ಯಾದ್ರಿ ಖಂಡ'ವನ್ನು ಸಂಪಾದಿಸುತ್ತಿರುವುದಾಗಿ ಹೇಳಿದೆ. ಅದಕ್ಕವರು ಆ ಕೃತಿಯ ತೀರ್ಥ ಕ್ಷೇತ್ರಗಳ ಕುರಿತ ಕಥೆಗಳನ್ನು ವೈಚಾರಿಕ ನೆಲೆಯಲ್ಲಿ ವಿಮರ್ಶಾತ್ಮಕವಾಗಿ ಬರೆಯಲು ಸೂಚಿಸಿದ್ದರು. ನಾನು ಎಲ್ಲಾ ತೀರ್ಥ ಕ್ಷೇತ್ರಗಳನ್ನು ಪೌರಾಣಿಕ ಹಿನ್ನೆಲೆಯಿಂದ ಮಾತ್ರ ನೋಡದೆ ವಿಸ್ತಾರವಾಗಿ ಆ ನದಿಯ ಇತ್ತೀಚಿನ ಸ್ಥಿತಿಗತಿಗಳು, ಹರಿವು, ಸಂಗಮ, ಅಣೆಕಟ್ಟುಗಳಂತಹ ವಿಷಯಗಳನ್ನೂ ಒಳಗೊಂಡು 80 ಕ್ಷೇತ್ರಗಳ 100 ತೀರ್ಥಗಳ ಚರಿತ್ರೆಯನ್ನು 169 ಪುಟಗಳ ಪೂರ್ವಪೀಠಿಕೆಯೊಂದಿಗೆ ವಿವರವಾಗಿ ಬರೆದು ಪ್ರಕಟಿಸಿದೆ. ಇದು ಷಟ್ಪದಿ ಛಂದಸ್ಸಿನಲ್ಲಿದೆ. 89 ಸಂಧಿಗಳು, 3,272 ಪದ್ಯಗಳಿವೆ ಅನುಬಂಧದಲ್ಲಿ ತೀರ್ಥಸೂಚಿ, ಕ್ಷೇತ್ರಸೂಚಿ, ಅಕಾರಾದಿ ಆಕರ ಗ್ರಂಥಗಳ ಸೂಚಿಗಳನ್ನು ಕೊಟ್ಟಿದ್ದೇನೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಇದನ್ನು ಪ್ರಕಟಿಸಿತು.

◆ ನಿಮ್ಮ ಗ್ರಂಥ ಸಂಪಾದನೆಯ ಹಾದಿಯಲ್ಲಿ ಪ್ರಮುಖ ಅನ್ನಿಸುವ ಗ್ರಂಥಗಳ ಕುರಿತು ಹೇಳಿ.

ತಾಯಿಗೆ ತನ್ನ ಎಲ್ಲ ಮಕ್ಕಳ ಮೇಲೆ ಸಮನಾದ ಪ್ರೀತಿಯಿರುವಂತೆ ಗ್ರಂಥ ಸಂಪಾದಕರಿಗೂ ತಮ್ಮ ಎಲ್ಲ ಕೃತಿಗಳ ಬಗ್ಗೆ ಮಮಕಾರವಿರುತ್ತದೆ. ನೀವು ಕೇಳಿದ್ದಕ್ಕೆ ಬತ್ತೀಸ ಪುತ್ತಳಿ ಕಥೆಯ ಬಗ್ಗೆ ಮಾತನಾಡುತ್ತೇನೆ. 'ದ್ವಾತ್ರಿಂಶತ್ ಪುತ್ತಳಿ ಕಥಾ' ಸಂಸ್ಕೃತ ವಾಙ್ಮಯದಲ್ಲಿ ಬಹಳ ಜನಪ್ರಿಯ. ಇದು ಭಾರತೀಯ ಕಥನ ಪರಂಪರೆಯಲ್ಲಿ ತನ್ನದೇ ಮಹತ್ವವನ್ನು ಹೊಂದಿದೆ. ಇದನ್ನಾಧರಿಸಿ ಕನ್ನಡದಲ್ಲಿ ನಾಲ್ಕು ಕಾವ್ಯಗಳು ರಚಿತವಾಗಿದ್ದವು. ಇವಿಷ್ಟು ಕೃತಿಗಳನ್ನು ನಾನು 'ಬತ್ತೀಸ ಪುತ್ತಳಿ ಕಥೆ' ಎಂಬ ಸಂಪುಟದಲ್ಲಿ ಸಂಪಾದಿಸಿ ಪ್ರಕಟಿಸಿದ್ದೇನೆ. ಭೋಜರಾಜ, ವಿಕ್ರಮಾದಿತ್ಯ ಮತ್ತು ಬೊಂಬೆಗಳೇ ಮುಖ್ಯ ಚೌಕಟ್ಟಿನಲ್ಲಿದ್ದರೂ ಬೇರೆ ಬೇರೆ ದೃಷ್ಟಾಂತಗಳನ್ನು ಬಳಸಿಕೊಂಡಿದೆ. ಎಡ್ಗರ್ಟನ್ ಅನ್ನುವ ವಿದ್ವಾಂಸರು ಸಂಸ್ಕೃತ 'ದ್ವಾತ್ರಿಂಶತ್ ಪುತ್ತಳಿ ಕಥಾ'ಅನ್ನು ಒಂದು ಸಂಪುಟದಲ್ಲಿ ತಂದಿದ್ದರು; ಅವರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಭಾರತದ ಹಸ್ತಪ್ರತಿಗಳನ್ನು ಆಧರಿಸಿ ಸಂಪಾದಿಸಿದ್ದಾರೆ. ಆದರೆ, ನಾನು ಕಾಲಾನುಕ್ರಮದಲ್ಲಿ ಪಠ್ಯಗಳನ್ನು ತೆಗೆದುಕೊಂಡಿದ್ದೇನೆ. ಹೀಗೆ ಒಂದೇ ವಸ್ತು ಕುರಿತ ಗ್ರಂಥಗಳನ್ನೆಲ್ಲ ಒಂದು ಸಂಪುಟದಲ್ಲಿ ಸಮಗ್ರವಾಗಿ ಸಂಪಾದಿಸಿರುವುದು ಕನ್ನಡ ಸಂದರ್ಭದಲ್ಲಿ ಆ ಹೊತ್ತಿಗೆ ಹೊಸದಾಗಿತ್ತು. ಎಲ್ಲರೂ ಮೂವತ್ತೆರಡು ಕಥೆಗಳನ್ನು ಮಾತ್ರ ಪ್ರಸ್ತಾಪಿಸಿದ್ದರೆ, ಇಲ್ಲಿ ಬೊಂಬೆಗಳ ಮೂವತ್ತೆರಡು ಕಥೆಯ ಜೊತೆ ಭೋಜರಾಜನ ಮೂವತ್ತೆರಡು ಕಥೆಗಳನ್ನು ಸೇರಿಸಿ ಅರವತ್ತನಾಲ್ಕು ಕಥೆಗಳನ್ನು ಹೇಳಲಾಗಿದೆ. ಇದಕ್ಕೆ 125 ಪುಟಗಳ ಪೂರ್ವ ಪೀಠಿಕೆ ಇದ್ದು ಈ ಕಥೆಗಳ ಐತಿಹ್ಯ, ಮಹತ್ವ, ಚಾರಿತ್ರಿಕ ನೆಲೆ, ಕಥೆಗಳ ಪ್ರಸಾರ, ಕನ್ನಡದ ಬತ್ತೀಸ ಪುತ್ತಳಿ ಕಥೆಗಳ ಮೇಲೆ ಅನ್ಯಭಾಷಾ ಕಥನಗಳ ಪ್ರಭಾವ, ಜನಪದ ಹಿನ್ನೆಲೆ, ಅವುಗಳ ಆಶಯಗಳನ್ನು ಕುರಿತು ಬರೆದಿದ್ದೇನೆ. ಇದು ಅನೇಕ ಪ್ರಶಸ್ತಿಗಳನ್ನು ಪಡೆಯಿತು. ಇದಲ್ಲದೇ ಅರಸರ ಚರಿತ್ರೆಗಳು ಅನ್ನುವ ಗ್ರಂಥ ಸಂಪಾದನೆ ಕಲಬುರ್ಗಿಯವರ ನೇತೃತ್ವದಲ್ಲಿ ಮಾಡಿದ್ದೇನೆ. ಪತ್ರಾಗಾರ ಇಲಾಖೆ ಅದನ್ನು ಪ್ರಕಟಿಸಿತ್ತು. ಇದು ಕರ್ನಾಟಕದ ಸ್ಥಳೀಯ ರಾಜರ ಹಾಗೂ ಇತರ ಚರಿತ್ರೆಗಳನ್ನು ತಿಳಿಸುವ ಹಸ್ತಪ್ರತಿ ಬಹಳ ಕ್ಲಿಷ್ಟವಾಗಿ ಮೋಡಿ ಅಕ್ಷರದಲ್ಲಿತ್ತು. ಈ ಕೆಲಸ ಬಹಳ ಸವಾಲಿನದಾಗಿತ್ತು. ಇದನ್ನು ಅವಿದ್ಯಾವಂತರು, ಚಾರಿತ್ರಿಕ ಪ್ರಜ್ಞೆ ಇಲ್ಲದವರು ಬರೆದಿದ್ದರು. ಎಲ್ಲವನ್ನು ಸಂಪಾದಿಸಿ ಒಂದು ಪುಸ್ತಕ ರೂಪಕ್ಕೆ ತಂದಿದ್ದೇನೆ.